# ಕರ್ನಾಟಕ ಸರ್ಕಾರ
## ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

080 – 29753051
directorfbish@gmail.com
www.esuraksha.karnataka.gov.in

ನಿರ್ದೇಶಕರ ಕಛೇರಿ
2ನೇ ಮಹಡಿ, ಕಲ್ಯಾಣ-ಸುರಕ್ಷಾ ಭವನ,
ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29


ಸಂ. ಲೀಗಲ್-2/ಇತರೆ/ಸಿಆರ್-12/2020-21 ದಿನಾಂಕ: 04-07-2020

**ಕಛೇರಿ ಜ್ಞಾಪನ**

ವಿಷಯ: ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಕಾರ್ಖಾನೆಗಳಲ್ಲಿ ಬಾಲವಾಡಿಗಳನ್ನು ಮುಚ್ಚಿರುವುದರಿಂದ ಮಹಿಳಾ ಕಾರ್ಮಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಹುತೇಕ ಮಾಧ್ಯಮ ವರದಿಗಳಲ್ಲಿ ವರದಿಯಾದಂತೆ ಕೋವಿಡ್-19 ಸಾಂಕ್ರಾಮಿಕ ರೋಗದ ಹಬ್ಬುವಿಕೆಯನ್ನು ತಡೆಯಲು ಸಹಕಾರಿಯಾಗುವಂತೆ ಭಾರತ ಸರ್ಕಾರದ ಗೃಹ ಮಂತ್ರಾಲಯವು ನೀಡಿರುವ ಮಾರ್ಗದರ್ಶನದಂತೆ ಹತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಮನೆಯಿಂದ ಹೊರಗಡೆ ಕಳುಹಿಸಬಾರದೆಂದು ಕಟ್ಟುನಿಟ್ಟಾಗಿ ಆದೇಶ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ಕಾರ್ಮಿಕರು ತಮ್ಮ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆಗಳಲ್ಲಿನ ಬಾಲವಾಡಿಗೆ ಕರೆದುಕೊಂಡು ಹೋಗುವುದು ನಿಷೇದಿತವಾಗಿರುತ್ತದೆ. ಅದಲ್ಲದೆ ಕಾರ್ಖಾನೆಗಳಲ್ಲಿ ಬಾಲವಾಡಿಗಳನ್ನು ನಡೆಸಿದಲ್ಲಿ ಮಕ್ಕಳಿಗೆ ಕೋವಿಡ್-19 ಸಾಂಕ್ರಾಮಿಕ ರೋಗ ಹಬ್ಬುವ ಸಾಧ್ಯತೆ ಹೆಚ್ಚಾಗಿರುವುದರಿಂದ ಕಾರ್ಖಾನೆಗಳಲ್ಲಿ ಬಾಲವಾಡಿಗಳನ್ನು ತೆರೆಯಲು ನಿರ್ಬಂಧವಿರುತ್ತದೆ. ಈ ಕಾರಣದಿಂದಾಗಿ ಬಹುತೇಕ ಮಹಿಳಾ ಕಾರ್ಮಿಕರು ತಮ್ಮ ಮಕ್ಕಳನ್ನು ಮನೆಯಲ್ಲಿ ನೋಡಿಕೊಳ್ಳಲು ಪರ್ಯಾಯ ವ್ಯವಸ್ಥೆ ಇಲ್ಲದಿರುವುದರಿಂದ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲ ಈ ಕಾರಣದಿಂದ ಕಾರ್ಖಾನೆಗೆ ಗೈರು ಹಾಜರಾದಲ್ಲಿ ಅವರ ಉದ್ಯೋಗ / ವೇತನ ಮತ್ತಿತರ ವಿಷಯಗಳಿಗೆ ಸಂಬಂಧಿಸಿಂತೆ ಆಡಳಿತ ವರ್ಗದವರು ಕ್ರಮ ಕೈಗೊಳ್ಳುತ್ತಿರುವ ಅಂಶಗಳು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿದ್ಯಾಮಾನಗಳನ್ನು ಪರಿಗಣನೆಗೆ ತೆಗೆದುಕೊಂಡು ಈ ಮಹಿಳಾ ಕಾರ್ಮಿಕರಿಗೆ ಕೆಲಸದ ಭದ್ರತೆ ಹಾಗೂ ಪರಿಹಾರವನ್ನು ಒದಗಿಸುವ ಅವಶ್ಯಕತೆಯಿದ್ದು, ಈ ಸಂಬಂಧ ಇಲಾಖೆಯಿಂದ ಸೂಕ್ತ ಕ್ರಮವಹಿಸಲು ಈ ಹಿಂದೆ ಬಾಲವಾಡಿಗಳನ್ನು ಒದಗಿಸಿ ನಿರ್ವಹಿಸುತ್ತಿದ್ದ ಕಾರ್ಖಾನೆಗಳಲ್ಲಿನ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಮಾಹಿತಿಯ ಅವಶ್ಯಕತೆಯಿರುತ್ತದೆ.

ಈ ಬಗ್ಗೆ ಸರ್ಕಾರಕ್ಕೆ ತುರ್ತಾಗಿ ವರದಿ ಸಲ್ಲಿಸಬೇಕಾಗಿರುವುದರಿಂದ ಎಲ್ಲಾ ಕ್ಷೇತ್ರಾಧಿಕಾರಿಗಳು ಈ ಬಗ್ಗೆ ಮಾಹಿತಿಯನ್ನು ಆಡಳಿತವರ್ಗದವರಿಂದ ಮೂರು ದಿನಗಳೊಳಗಾಗಿ ಪಡೆದು ಕೆಳಗಿನ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ.

| ಕ್ರ. ಸಂ. | ಕಾರ್ಖಾನೆಯ ಹೆಸರು ಮತ್ತು ವಿಳಾಸ | ಲಾಕ್‌ಡೌನ್‌ಗಿಂತ ಮೊದಲು ಬಾಲವಾಡಿಯಲ್ಲಿ ಇದ್ದ ಮಕ್ಕಳ ಸಂಖ್ಯೆ | ಲಾಕ್‌ಡೌನ್ ನಂತರ ಕೆಲಸಕ್ಕೆ ಹಾಜರಾಗುತ್ತಿರುವ ಈ ಮಕ್ಕಳ ತಾಯಂದಿರ ಸಂಖ್ಯೆ | ಗೈರು ಹಾಜರಿಯಿಂದ ಕೆಲಸದಿಂದ ತೆಗೆದು ಹಾಕಿರುವ ತಾಯಂದಿರ ಸಂಖ್ಯೆ | ರಜೆಯ ಮೇಲಿರುವ ತಾಯಂದಿರ ಸಂಖ್ಯೆ |
|---|---|---|---|---|---|
| | | | | | |
| | | | | | |

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

**ಇವರಿಗೆ:**

1. ಕಾರ್ಖಾನೆಗಳು ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು, ಬೆಂಗಳೂರು.
2. ಕಾರ್ಖಾನೆಗಳ ಜಂಟಿ ನಿರ್ದೇಶಕರು-1/ 2/ ಬಳ್ಳಾರಿ ವಿಭಾಗ.
3. ಕಾರ್ಖಾನೆಗಳ ಉಪ ನಿರ್ದೇಶಕರು, ವಿಭಾಗ-1/ 2/ 3/ 4/ 5 ಬೆಂಗಳೂರು, ವಿಭಾಗ-1 ಮೈಸೂರು, ತುಮಕೂರು ವಿಭಾಗ, ವಿಭಾಗ-1 ಮಂಗಳೂರು, ವಿಭಾಗ-1 ಬೆಳಗಾವಿ.
4. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ವಿಭಾಗ-6/ 7/ 8/ 9/ 10 ಬೆಂಗಳೂರು, ಬಳ್ಳಾರಿ, ಕಲಬುರಗಿ, ವಿಭಾಗ-1 ಹುಬ್ಬಳ್ಳಿ,
5. ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ವಿಭಾಗ-11/ 12/ 13/ 14/ 15/ 16/ 17/ 18/ 19/ 20 ಬೆಂಗಳೂರು, ವಿಭಾಗ-2 ಮೈಸೂರು, ಹಾಸನ ವಿಭಾಗ, ಶಿವಮೊಗ್ಗ ವಿಭಾಗ, ವಿಭಾಗ-2 ಮಂಗಳೂರು, ವಿಭಾಗ-2 ಹುಬ್ಬಳ್ಳಿ, ವಿಭಾಗ-2 ಬೆಳಗಾವಿ, ರಾಯಚೂರು ವಿಭಾಗ, ಕೊಪ್ಪಳ ವಿಭಾಗ, ಉಡುಪಿ ವಿಭಾಗ, ದಾವಣಗೆರೆ ವಿಭಾಗ.
6. ಕಛೇರಿ ಪ್ರತಿ.